**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಸ್ಪೆಶಲ್ (ಎಂ.ಎಂ.ಆರ್.ಡಿ.)ಕೇಸ್ ನಂ.12/2023**

**(ಪಿಡಬ್ಲ್ಯೂ- 01, ದೂರುದಾರರು)**

ಸಾಕ್ಷಿದಾರರ ಹೆಸರು : ಸುಭಾಸಚಂದ್ರ ಎಸ್.

ತಂದೆಯ ಹೆಸರು : ಸೋಮಪ್ಪ

ವಯಸ್ಸು : **44** ವರ್ಷ

ಉದ್ಯೋಗ : ಭೂ ವಿಜ್ಞಾನಿ, ಹಿರಿಯ ಭೂ ವಿಜ್ಞಾನಿಗಳ ಕಚೇರಿ, ಕೊಡಗು.

ವಾಸಸ್ಥಳ : ಕೊಡಗು.

**ಸಾಕ್ಷಿಗೆ ಇಂದು ದಿನಾಂಕ :- 29/07/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ದಿ: 15.07.2020 ರಿಂದ ದಿ: 01.07.2022 ರವರೆಗೆ ನಾನು ವಿಜಯಪುರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಭೂ ವಿಜ್ಞಾನಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ತಾಳಿಕೋಟೆ ನನ್ನ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತಿತ್ತು.

2. ದಿ: 25.05.2022 ರಂದು ಕೆ.ಪಿ. ಚಿಂದಬರಂ ಹಿರಿಯ ಭೂ ವಿಜ್ಞಾನಿಗಳು, ಗಣಿ ಮತ್ತು ಭೂ ವಿಜ್ಞಾಣ ಇಲಾಖೆ ವಿಜಯಪುರ ಇವರಿಗೆ ಮಿಣಜಗಿ ಗ್ರಾಮದಲ್ಲಿ ಅಕ್ರಮವಾಗಿ ಗಣಿಗಾರಿಕೆ ಆಗುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿಯವರು ನನ್ನನ್ನು ಕರೆದುಕೊಂಡು ಬೆಳಿಗ್ಗೆ 8.00 ಗಂಟೆಗೆ ಕಚೇರಿಯಿಂದ ಹೊರಟು ಬೆಳಿಗ್ಗೆ 10.30 ಗಂಟೆಗೆ ಮಿಣಜಗಿ ಗ್ರಾಮಕ್ಕೆ ಸ್ಥಳ ಪರಿಶೀಲನೆಗೆ ಹೋದರು. ಅಲ್ಲಿಗೆ ಚಾಸಾ-1, ಮತ್ತು ಚಾಸಾ-3 ರಿಂದ 6 ರವರನ್ನು ಕರೆಸಿಕೊಂಡಿರುತ್ತಾರೆ.

3. ನಂತರ ನಾವು ದೂರು ಬಂದಿದ್ದ ಸರ್ವೆ ನಂ.192/4, 193/6, 193/7, 193/9, ಮತ್ತು 193/10 ರ ಜಮೀನಿಗೆ ಹೋಗಿ, ಪರಿಶೀಲಿಸಿರುತ್ತೇವೆ. ಅಲ್ಲಿ ಪರ್ಸಿ ಕಲ್ಲು ಗಣಿಗಾರಿಗೆ ಮಾಡಿದ್ದ ಹಳೆಯ ಗುಂಡಿಗಳು ಕಂಡು ಬರುತ್ತಿದ್ದು, ಅದರ ಪಕ್ಕದಲ್ಲಿ

ಹೊಸದಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು ಕಂಡು ಬರುತ್ತಿತು. ಅದನ್ನು ತಾಲೂಕು ಸರ್ವೆಯರ್ ಚಾಸಾ-4 ರವರ ಮೂಲಕ ಅಳತೆ ಮಾಡಿ ನೋಡಲಾಗಿ ಸರ್ವೆ ನಂ.192/4 ರಲ್ಲಿ ಸುಮಾರು ಸರಾಸರಿ 02 ಮೀಟರ್ ಆಳದವರೆಗೆ ಗಣಿಗಾರಿಕೆ ಮಾಡಿ, ಅಂದಾಜು 3156 ಮೆಟ್ರಿಕ ಟನ್ ನಷ್ಟು ಪರ್ಸಿಕಲ್ಲು ಗಣಿಗಾರಿಕೆ ಮಾಡಿ, ಸಾಗಾಟ ಮಾಡಿರುವುದು ಕಂಡು ಬಂತು. ಅದರ ಉದ್ದ ಮತ್ತು ಅಗಲ ನನಗೆ ಈಗ ನೆನಪಿಲ್ಲ. ಸದರಿ ಸ್ಥಳದಲ್ಲಿ ಗಣಿಗಾರಿಕೆ ಮಾಡಲು ಯಾವುದೇ ಪರವಾಣಿಗೆ ತೆಗೆದುಕೊಂಡಿರಲಿಲ್ಲ. ಸದರಿ ಜಮೀನಿನ ಸರ್ವೆ ನಂಬರನ್ನು ನಮ್ಮ ಜೊತೆ ಬಂದಿದ್ದ ಚಾಸಾ-5 ರವರು ತಿಳಿಸಿ, ಅದು ಬಸವರಾಜ ತಂದೆ ಹನಮಂತ್ರಾಯ ಬಾಗೇವಡಿ ರವರಿಗೆ ಸೇರಿದ್ದು ತಿಳಿಸಿದರು. ಆ ರೀತಿ ಗಣಿಗಾರಿಕೆ ಮಾಡಿ, ಅಂದಾಜು ರೂ.3,54,000/- ಗಳನ್ನು ರಾಜಧನ ಮತ್ತು ಇತರ ಶುಲ್ಕಗಳ ಬಾಬ್ತು ಸರಕಾರದ ಬೊಕ್ಕಸಕ್ಕೆ ನಷ್ಟ ಆಗಿರುವುದು ಕಂಡು ಬಂತು.

4. ಆ ಜಾಗಕ್ಕೆ ಹೊಂದಿಕೊಂಡಂತೆ ಸರ್ವೆ ನಂ.193/6 ರ ಜಮೀನನ್ನು ಪರಿಶೀಲಿಸಿದಾಗ ಅದೇ ರೀತಿ ಅಲ್ಲಿ ಪರ್ಸಿ ಕಲ್ಲು ಗಣಿಗಾರಿಗೆ ಮಾಡಿದ್ದ ಹಳೆಯ ಗುಂಡಿಗಳು ಕಂಡು ಬರುತ್ತಿದ್ದು, ಅದರ ಪಕ್ಕದಲ್ಲಿ ಹೊಸದಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು ಕಂಡು ಬರುತ್ತಿತು. ಅದನ್ನು ಅಳತೆ ಮಾಡಿ ನೋಡಲಾಗಿ 50 ಮೀಟರ್ ಉದ್ದ, 30 ಮೀಟರ್ ಅಗಲ, ಸರಾಸರಿ 01 ಮೀಟರ್ ಆಳದವರೆಗೆ ಗಣಿಗಾರಿಕೆ ಮಾಡಿ, ಅಂದಾಜು 3945 ಮೆಟ್ರಿಕ ಟನ್ ನಷ್ಟು ಪರ್ಸಿಕಲ್ಲು ಗಣಿಗಾರಿಕೆ ಮಾಡಿ, ಸಾಗಾಟ ಮಾಡಿರುವುದು ಕಂಡು ಬಂತು. ಸದರಿ ಗಣಿಗಾರಿಕೆ ಮಾಡಲು ಯಾವುದೇ ಪರವಾಣಿಗೆ ತೆಗೆದುಕೊಂಡಿರಲಿಲ್ಲ. ಸದರಿ ಜಮೀನಿನ ಸರ್ವೆ ನಂಬರನ್ನು ನಮ್ಮ ಜೊತೆ ಬಂದಿದ್ದ ಚಾಸಾ-

5 ರವರು ತಿಳಿಸಿದರು. ಸದರಿ ಜಮೀನು ಶಿವಪ್ಪ ತಂದೆ ಯಮನಪ್ಪ ಹಡಪದ ಇವರ ಮಾಲೀಕತ್ವದಲ್ಲಿ ಇರುವುದಾಗಿ ಚಾಸಾ-5 ರವರು ತಿಳಿಸಿದರು. ಆ ರೀತಿ ಗಣಿಗಾರಿಕೆ ಮಾಡಿ, ಅಂದಾಜು ರೂ.3,84,000/- ಗಳಷ್ಟು ರಾಜಧನ ಮತ್ತು ಇತರ ಶುಲ್ಕಗಳ ಬಾಬ್ತು ಸರಕಾರದ ಬೊಕ್ಕಸಕ್ಕೆ ನಷ್ಟ ಆಗಿರುವುದು ಕಂಡು ಬಂತು. ಸಾಕ್ಷಿಯು ಸ್ಪಷ್ಟವಾಗಿ ನನಗೆ ಅಂದಾಜು ಎಷ್ಟು ನಷ್ಟವಾಗಿದೆ ಎಂದು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

5. ಆ ಜಾಗಕ್ಕೆ ಹೊಂದಿಕೊಂಡಂತೆ ಸರ್ವೆ ನಂ.193/7 ರ ಜಮೀನನ್ನು ಪರಿಶೀಲಿಸಿದಾಗ, ಅದೇ ರೀತಿ ಅಲ್ಲಿ ಪರ್ಸಿ ಕಲ್ಲು ಗಣಿಗಾರಿಗೆ ಮಾಡಿದ್ದ ಹಳೆಯ ಗುಂಡಿಗಳು ಕಂಡು ಬರುತ್ತಿದ್ದು, ಅದರ ಪಕ್ಕದಲ್ಲಿ ಹೊಸದಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು ಕಂಡು ಬರುತ್ತಿತು. ಅದನ್ನು ಅಳತೆ ಮಾಡಿ ನೋಡಲಾಗಿ 42 ಮೀಟರ್ ಉದ್ದ, 30 ಮೀಟರ್ ಅಗಲ, ಸರಾಸರಿ 01 ಮೀಟರ್ ಆಳದವರೆಗೆ ಗಣಿಗಾರಿಕೆ ಮಾಡಿ, ಅಂದಾಜು 2209 ಮೆಟ್ರಿಕ ಟನ್ ನಷ್ಟು ಪರ್ಸಿಕಲ್ಲು ಗಣಿಗಾರಿಕೆ ಮಾಡಿ, ಸಾಗಾಟ ಮಾಡಿರುವುದು ಕಂಡು ಬಂತು. ಸದರಿ ಗಣಿಗಾರಿಕೆ ಮಾಡಲು ಯಾವುದೇ ಪರವಾಣಿಗೆ ತೆಗೆದುಕೊಂಡಿರಲಿಲ್ಲ. ಸದರಿ ಜಮೀನಿನ ಸರ್ವೆ ನಂಬರನ್ನು ನಮ್ಮ ಜೊತೆ ಬಂದಿದ್ದ ಚಾಸಾ-5 ರವರು ತಿಳಿಸಿದರು. ಸದರಿ ಜಮೀನು ಮೋತಿಲಾಲ ತಂದೆ ರೂಪಸಿಂಗ ಚವ್ಹಾಣ ರವರ ಮಾಲೀಕತ್ವದಲ್ಲಿ ಇರುವುದಾಗಿ ಚಾಸಾ-5 ರವರು ತಿಳಿಸಿದರು. ಆ ರೀತಿ ಗಣಿಗಾರಿಕೆ ಮಾಡಿ, ಅಂದಾಜು ರೂ.2,50,000/- ಗಳಷ್ಟು ರಾಜಧನ ಮತ್ತು ಇತರ ಶುಲ್ಕಗಳ ಬಾಬ್ತು ಸರಕಾರದ ಬೊಕ್ಕಸಕ್ಕೆ ನಷ್ಟ ಆಗಿರುವುದು ಕಂಡು ಬಂತು.

6. ಆ ಜಾಗಕ್ಕೆ ಹೊಂದಿಕೊಂಡಂತೆ ಸರ್ವೆ ನಂ.193/9 ರ ಜಮೀನನ್ನು ಪರಿಶೀಲಿಸಿದಾಗ, ಅದೇ ರೀತಿ ಅಲ್ಲಿ ಪರ್ಸಿ ಕಲ್ಲು ಗಣಿಗಾರಿಗೆ ಮಾಡಿದ್ದ ಹಳೆಯ ಗುಂಡಿಗಳು ಕಂಡು ಬರುತ್ತಿದ್ದು, ಅದರ ಪಕ್ಕದಲ್ಲಿ ಹೊಸದಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು ಕಂಡು ಬರುತ್ತಿತು. ಅದನ್ನು ಅಳತೆ ಮಾಡಿ ನೋಡಲಾಗಿ 30 ಮೀಟರ್ ಉದ್ದ, 15 ಮೀಟರ್ ಅಗಲ, ಸರಾಸರಿ 01 ಮೀಟರ್ ಆಳದವರೆಗೆ ಗಣಿಗಾರಿಕೆ ಮಾಡಿ, ಅಂದಾಜು 1200 ಮೆಟ್ರಿಕ ಟನ್ ನಷ್ಟು ಪರ್ಸಿಕಲ್ಲು ಗಣಿಗಾರಿಕೆ ಮಾಡಿ, ಸಾಗಾಟ ಮಾಡಿರುವುದು ಕಂಡು ಬಂತು. ಸದರಿ ಗಣಿಗಾರಿಕೆ ಮಾಡಲು ಯಾವುದೇ ಪರವಾಣಿಗೆ ತೆಗೆದುಕೊಂಡಿರಲಿಲ್ಲ. ಸದರಿ ಜಮೀನಿನ ಸರ್ವೆ ನಂಬರನ್ನು ನಮ್ಮ ಜೊತೆ ಬಂದಿದ್ದ ಚಾಸಾ-5 ರವರು ತಿಳಿಸಿದರು. ಸದರಿ ಜಮೀನು ಶಿವಪ್ಪ ತಂದೆ ರೂಪಸಿಂಗ್ ಚವ್ಹಾಣ ರವರ ಮಾಲೀಕತ್ವದಲ್ಲಿ ಇರುವುದಾಗಿ ಚಾಸಾ-5 ರವರು ತಿಳಿಸಿದರು. ಆ ರೀತಿ ಗಣಿಗಾರಿಕೆ ಮಾಡಿ, ಅಂದಾಜು ರೂ.1,34,000/- ಗಳಷ್ಟು ರಾಜಧನ ಮತ್ತು ಇತರ ಶುಲ್ಕಗಳ ಬಾಬ್ತು ಸರಕಾರದ ಬೊಕ್ಕಸಕ್ಕೆ ನಷ್ಟ ಆಗಿರುವುದು ಕಂಡು ಬಂತು.

7. ಆ ಜಾಗಕ್ಕೆ ಹೊಂದಿಕೊಂಡಂತೆ ಸರ್ವೆ ನಂ.193/10 ರ ಜಮೀನನ್ನು ಪರಿಶೀಲಿಸಿದಾಗ, ಅದೇ ರೀತಿ ಅಲ್ಲಿ ಪರ್ಸಿ ಕಲ್ಲು ಗಣಿಗಾರಿಗೆ ಮಾಡಿದ್ದ ಹಳೆಯ ಗುಂಡಿಗಳು ಕಂಡು ಬರುತ್ತಿದ್ದು, ಅದರ ಪಕ್ಕದಲ್ಲಿ ಹೊಸದಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು ಕಂಡು ಬರುತ್ತಿತು. ಅದನ್ನು ಅಳತೆ ಮಾಡಿ ನೋಡಲಾಗಿ 28 ಮೀಟರ್ ಉದ್ದ, 15 ಮೀಟರ್ ಅಗಲ, ಸರಾಸರಿ 01 ಮೀಟರ್ ಆಳದವರೆಗೆ ಗಣಿಗಾರಿಕೆ ಮಾಡಿ, ಅಂದಾಜು

1300 ಮೆಟ್ರಿಕ ಟನ್ ನಷ್ಟು ಪರ್ಸಿಕಲ್ಲು ಗಣಿಗಾರಿಕೆ ಮಾಡಿ, ಸಾಗಾಟ ಮಾಡಿರುವುದು ಕಂಡು ಬಂತು. ಸದರಿ ಗಣಿಗಾರಿಕೆ ಮಾಡಲು ಯಾವುದೇ ಪರವಾಣಿಗೆ ತೆಗೆದುಕೊಂಡಿರಲಿಲ್ಲ. ಸದರಿ ಜಮೀನಿನ ಸರ್ವೆ ನಂಬರನ್ನು ನಮ್ಮ ಜೊತೆ ಬಂದಿದ್ದ ಚಾಸಾ-5 ರವರು ತಿಳಿಸಿದರು. ಸದರಿ ಜಮೀನು ಶಂಕ್ರೆಪ್ಪ ತಂದೆ ರೂಪಸಿಂಗ ನಾಯಕ ರವರ ಮಾಲೀಕತ್ವದಲ್ಲಿ ಇರುವುದಾಗಿ ಚಾಸಾ-5 ರವರು ತಿಳಿಸಿದರು. ಆ ರೀತಿ ಗಣಿಗಾರಿಕೆ ಮಾಡಿ, ಅಂದಾಜು ರೂ.1,50,000/- ಗಳಷ್ಟು ರಾಜಧನ ಮತ್ತು ಇತರ ಶುಲ್ಕಗಳ ಬಾಬ್ತು ಸರಕಾರದ ಬೊಕ್ಕಸಕ್ಕೆ ನಷ್ಟ ಆಗಿರುವುದು ಕಂಡು ಬಂತು.

8. ಸ್ಥಳದಲ್ಲಿ ಸಂಜೆ 5.20 ರಿಂದ 6.00 ರವರೆಗೆ ಪಂಚನಾಮೆಯನ್ನು ಮಾಡಿರುತ್ತೇನೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸ್ಥಳದಲ್ಲಿ 10 ಪೋಟೋಗಳನ್ನು ತೆಗೆಸಿಕೊಂಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.2, ನಿ.ಪಿ.2(1) ರಿಂದ 2(9) ಎಂದು ಗುರುತಿಸಲಾಯಿತು. ಸಿಡಿಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಫೋಟೋಗಳನ್ನು ತೆಗೆದು, ಅದನ್ನು ಪ್ರಿಂಟ್ ಹಾಕಿಸಿ, ಕಡತಕ್ಕೆ ಅಳವಡಿಸಿಕೊಂಡ ಬಗ್ಗೆ 65(ಬಿ) ಸಾಕ್ಷ್ಯಾಧಿನಿಯಮ ರಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದು ಅದನ್ನು ನಿ.ಪಿ.4

ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಅದೇ ದಿನ ಸದರಿ ಜಮೀನಿನ ಆರ್.ಟಿ.ಸಿ.ಗಳನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.5 ರಿಂದ 9 ಎಂದು ಗುರುತಿಸಲಾಯಿತು.

9. ದಿ: 09.06.2022 ರಂದು ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯದ ಮುದ್ದೆಬಿಹಾಳ ಇಲ್ಲಿ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ಖಾಸಗಿ ದೂರನ್ನು ಸಲ್ಲಿಸಲು ನಾನು ಪ್ರಾಧಿಕೃತ ಅಧಿಕಾರಿ ಎಂದು ತೋರಿಸಲು ವಿಶೇಷ ರಾಜ್ಯ ಪತ್ರಿಕೆಯ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಖಾಸಗಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನಾನು ನೋಡಿರುವುದಿಲ್ಲ.

**<u>ಪಾಟೀ ಸವಾಲು:- ಶ್ರೀ.ಜಿ.ಬಿ.ಕೆ., ವಕೀಲರಿಂದ 1 ನೇ ಆರೋಪಿ ಪರಃ</u>**

10. ನಾನು ದೂರಿನಲ್ಲಿ ಮತ್ತು ಪಂಚನಾಮೆಯಲ್ಲಿ ಚಾಸಾ-2 ರವರಿಗೆ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದಿತ್ತು ಎಂದು ಹೇಳಿಲ್ಲ ಎಂದರೆ ಸರಿ. ಚಾಸಾ-2 ರವರಿಗೆ ಎಷ್ಟು ಗಂಟೆಗೆ ಮಾಹಿತಿ ಬಂದಿತ್ತು ಎಂದು ನಾನು ಹೇಳಿಲ್ಲ ಎಂದರೆ ಸರಿ. ಚಾಸಾ-1, ಮತ್ತು 3 ರಿಂದ 6 ರವರಿಗೆ ನಾನು ನೋಟಿಸ್ ನೀಡಿರುವುದಿಲ್ಲ.

11. ಮಿಣಜಗಿ ಗ್ರಾಮದಲ್ಲಿ ಸಾಕಷ್ಟು ಜನವಸತಿ ಇದೆ ಎಂದರೆ ಸರಿ. ಸದರಿ ಗಣಿಗಾರಿಕೆ ಆದ ಜಮೀನಿನ ಸುತ್ತ ಯಾವುದೇ ಕೃಷಿ ಜಮೀನು ಇರುವುದಿಲ್ಲ. ಸಾಕ್ಷಿಯು

ಸ್ವಲ್ಪ ದೂರದಲ್ಲಿ ಇತ್ತು ಎಂದು ನುಡಿಯುತ್ತಾರೆ. ಸ್ಥಳಿಯರನ್ನು ಪಂಚರಾಗಿ ನಾವು ಕರೆದಿರುತ್ತೇವೆ, ಆದರೆ ಯಾರು ಬರಲು ಒಪ್ಪಿರುವುದಿಲ್ಲ. ಮೂರು ಜಮೀನಿನ ಮಾಲೀಕರು ಒಬ್ಬರಿಗೊಬ್ಬರು ಸಂಬಂಧಿಕರಲ್ಲ ಎಂದರೆ ಸರಿ. ಬೇರೆ ಬೇರೆ ಜಮೀನಿನಲ್ಲಿ ಗಣಿಗಾರಿಕೆ ಆದ ಬಗ್ಗೆ ಪ್ರತ್ಯೇಕ ಪಂಚನಾಮೆ ಮಾಡಿ, ಪ್ರತ್ಯೇಕ ದೂರನ್ನು ನಾವು ಸಲ್ಲಿಸಿರುವುದಿಲ್ಲ. ಗಣಿಗಾರಿಗೆ ಆದ ಪ್ರದೇಶವನ್ನು ಅಂದಾಜಿನ ಮೇಲೆ ಅಳತೆ ಮಾಡಿ, ಹೇಳಿರುತ್ತೇವೆ ಎಂದರೆ ಸರಿ. ನಾನು ಸ್ಥಳದಲ್ಲಿ ಗಣಿಗಾರಿಗೆ ಆಗುತ್ತಿದ್ದ ಕಲ್ಲಿನ ಮಾದರಿಯನ್ನು ಸಂಗ್ರಹಿಸಿಕೊಂಡಿರುವುದಿಲ್ಲ. ಸದರಿ ಸ್ಥಳದಿಂದ ಗಣಿಗಾರಿಗೆ ಉಪಯೋಗಿಸುವ ಸಾಮಗ್ರಿಗಳನ್ನು ಅಮಾನತ ಪಡೆಸಿಕೊಂಡಿಲ್ಲ ಎಂದರೆ ಸರಿ. ದೂರನ್ನು ನಾನು ದಾಳಿ ಮಾಡಿದ 15 ದಿನಗಳ ನಂತರ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸರ್ವೆ ನಕಾಶೆ ಮತ್ತು ವರದಿಯನ್ನು ಹಾಜರು ಪಡೆಸಿಲ್ಲ ಎಂದರೆ ಸರಿ. ನಾನು ಜಮೀನಿನ ಮಾಲೀಕರು ಯಾರು ಎಂದು ತಿಳಿದುಕೊಂಡಿರುವುದಿಲ್ಲ.

10. ನಾವು ಮಿಣಜಗಿ ಗ್ರಾಮಕ್ಕೆ ಬೆಳಿಗ್ಗೆ 10.30 ಗಂಟೆಗೆ ತಲುಪಿರುತ್ತೇವೆ. ನಾವು ಮಿಣಜಗಿ ಗ್ರಾಮಕ್ಕೆ ಹೋದ ನಂತರ ಚಾಸಾ-1, 4 ಮತ್ತು 5 ರವರು ಸ್ಥಳಕ್ಕೆ ಬಂದಿರುತ್ತಾರೆ. ಚಾಸಾ-6 ರವರು ನಾವು ಹೋಗುವಾಗ ಮಿಣಜಗಿ ಗ್ರಾಮದಲ್ಲಿ ಇದ್ದರು. ಸದರಿಯವರು ಯಾವ ವಾಹನದಲ್ಲಿ ಸ್ಥಳಕ್ಕೆ ಬಂದಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ನಿರ್ಧಿಷ್ಟವಾಗಿ ಯಾವ ಸರ್ವೆ ನಂಬರನ ಜಮೀನನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಅಳತೆ ಮಾಡಿರುತ್ತೇವೆ ಎಂದು ಈಗ ನನಗೆ ನೆನಪಿಲ್ಲ. ಪಂಚನಾಮೆಯನ್ನು ಸ್ಥಳದಲ್ಲಿ ತಯಾರಿಸಿರುತ್ತೇನೆ. ನಿ.ಪಿ.1 ರಲ್ಲಿ ಯಾವ ಸರ್ವೆ ನಂಬರಿನ ಜಮೀನಿನಲ್ಲಿ ಅದನ್ನು

ತಯಾರಿಸಿರುತ್ತೇವೆ ಎಂದು ಬರೆದಿಲ್ಲ ಎಂದರೆ ಸರಿ. ನಿ.ಪಿ.1 ಕ್ಕೆ ಚಾಸಾ-3 ರಿಂದ 6 ರವರ ಕಚೇರಿಗೆ ಹೋಗಿ ಅವರ ಕಚೇರಿ ಮೊಹರು ಮತ್ತು ಸಹಿಯನ್ನು ಹಾಕಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಫೋಟೋಗಳನ್ನು ತೆಗೆಸಿ ಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.4 ನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಂಜೆ 6.00 ಗಂಟೆಯ ನಂತರ ಕತ್ತಲಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ಈ ಪ್ರಕರಣಕ್ಕೆ ಸಂಬಂಧಿಸಿದ ಜಮೀನಿನ ಅಳತೆ ಮಾಡುವ ಸಮಯದಲ್ಲಿ ತಯಾರಿಸಿದ್ದಲ್ಲ ಎಂದರೆ ಸರಿಯಲ್ಲ. ನಿ.ಪಿ.2, 2(1) ರಿಂದ 2(9) ರಲ್ಲಿ ಚಾಸಾ-1, ಚಾಸಾ-3 ರಿಂದ 6 ರವರು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಂಕಿ ಸಂಖ್ಯೆಗೋಸ್ಕರ ಆರೋಪಿತರ ಮೇಲೆ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಿ:25.05.2022 ರಂದು ಆರೋಪಿತರ ಜಮೀನಿಗೆ ಭೇಟಿ ನೀಡಿಲ್ಲ ಮತ್ತು ಅಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಜಮೀನಿನಲ್ಲಿ ಯಾವುದೇ ಗಣಿಗಾರಿಕೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ನಾನು ಯಾವುದೇ ನೋಟಿಸ್ ನೀಡಿರುವುದಿಲ್ಲ. ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಶ್ರೀ.ಎಮ್.ಎಸ್.ಕೆ., ವಕೀಲರಿಂದ 3 ರಿಂದ 5 ನೇ ಆರೋಪಿ ಪರಃ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.